ಪಿ.ಡಬ್ಲ್ಯು. 1

(ಇಂದು ದಿನಾಂಕ 21-01-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಎಂ.ಎಸ್.ಎಸ್. ವಕೀಲರಿಂದ–**

ಗಜಾನನ ನಾರಾಯಣ ಶೇಟ್ ಎಂಬುವವರು ನನ್ನ ಚಿಕ್ಕಪ್ಪ. ಗಜಾನನ ನಾರಾಯಣ ಶೇಟ್‌ರವರ ಹಕ್ಕಿನ ಸ್ಥಳದ ಸ.ನಂ. 638 ಅ/2 ಅ ಆಗಿರುತ್ತದೆ. ಸ.ನಂ. 638 ಅ/2 ಅ ದಲ್ಲಿ ಪ್ರತಿವಾದಿಗಳ ತಂದೆ ನಾಗಪ್ಪ ಶ್ಯಾನಭಾಗರವರು 0-1-8 ಆಣೆ ಕ್ಷೇತ್ರವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿ ಕ್ರಯದ ವಿಚಾರ ನಂತರದಲ್ಲಿ ನನಗೆ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ತಂದೆ ಕ್ರಯಕ್ಕೆ ಪಡೆದ ನಂತರ ಸದರಿ ಸ್ವತ್ತಿಗೆ ಸ.ನಂ. 638 ಅ/7 ಎಂದು ಪ್ರತ್ಯೇಕವಾಗಿ ಸಂಖ್ಯೆ ನೀಡಲಾಗಿರುತ್ತದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಸ.ನಂ. 638 ಅ/7 ರಲ್ಲಿನ ಸ್ವತ್ತಿನ ಸ್ವಾಧೀನಾನುಭವದಲ್ಲಿ ಪ್ರತಿವಾದಿಗಳು ಹಾಗೂ ಅವರ ತಂದೆ ಕ್ರಯಕ್ಕೆ ಪಡೆದಾಗಿನಿಂದ ಇದ್ದಾರೆ ಎಂದರೆ ಸಾಕ್ಷಿಯು ಸ್ವತ್ತು ನಮ್ಮ ಸ್ವಾಧೀನದಲ್ಲಿಯೇ ಇದ್ದು, ಪ್ರತಿವಾದಿಗಳು ಒತ್ತಾಯಪೂರ್ವಕವಾಗಿ ಓಡಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ತಂದೆಯವರು ತಮ್ಮ ಜೀವಿತಾವಧಿಯವರೆಗೆ ಅವರು ಖರೀದಿಸಿದ 0-1-8 ಆಣೆ ಕ್ಷೇತ್ರದಲ್ಲಿ ಸ್ವಾಧೀನದಲ್ಲಿ ಇದ್ದು, ಅವರ ಕಾಲಾನಂತರ ಪ್ರತಿವಾದಿಗಳು ಸದರಿ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು 0-1-8 ಆಣೆ ಕ್ಷೇತ್ರದಲ್ಲಿ ಸ್ವಾಧೀನಾನುಭವದಲ್ಲಿ ಇದ್ದರೂ ಸಹ ಸದರಿ ಸ್ವತ್ತು ನಮ್ಮ ಸ್ವಾಧೀನಾನುಭವದಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ. 638 ಅ/2 ಅ ಮತ್ತು ಸ.ನಂ. 638 ಅ/2 ಬ ದ ದಕ್ಷಿಣ ದಿಕ್ಕಿಗೆ ಗ್ರಾಮ ಪಂಚಾಯತಿಯವರು ಮಾಡಿರುವ ಕಲಭಾಗ ಗ್ರಾಮದ ಪಂಚಾಯತ್ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯು ಪೂರ್ವ ದಿಕ್ಕಿನಲ್ಲಿ ಮುಂದುವರಿದು ರಾಷ್ಟ್ರೀಯ ಹೆದ್ದಾರಿಗೆ ಸೇರುತ್ತದೆ ಎಂದರೆ ಸರಿ.

ಗಜಾನನ ನಾರಾಯಣ ಶೇಟ್‌ರವರಿಗೆ ಸೇರಿದ ಸ.ನಂ. 638 ಅ/2 ಅ ದ ಮೂಲಕವೇ ನಮಗೆ ಸೇರಿದ ಸ.ನಂ. 636/4 ಬ ಗೆ ಹೋಗಲು ದಾರಿ ಇದೆ ಎಂದರೆ ಸರಿಯಲ್ಲ. ನಾವು ನಮ್ಮ ಸ.ನಂ. 636/4 ಬ ಗೆ ಹೋಗಲು ಹಾಗೂ ಗಜಾನನ ಶೇಟ್‌ರವರ ಹಕ್ಕಿನ ಸ್ವತ್ತಿಗೆ ಹೋಗಲು ಸ.ನಂ. 638 ಅ/2 ಅ ದಲ್ಲಿ ಇರುವ ದಾರಿಯನ್ನೇ ಉಪಯೋಗಿಸಿಕೊಂಡು ಬರುತ್ತಿದ್ದೇವೆ ಎಂದರೆ ಸರಿಯಲ್ಲ.ಸದರಿ ದಾರಿಯನ್ನೇ ಪ್ರತಿವಾದಿಯರೂ ಸಹ ತಮ್ಮ ಸ್ವತ್ತುಗಳಿಗೆ ಹೋಗಲು ಅನಾದಿ ಕಾಲದಿಂದಲೂ ಉಪಯೋಗಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸ.ನಂ. 638 ಅ/2 ಅ ದಲ್ಲಿ ಇರುವ ದಾರಿಯ ಬಗ್ಗೆ ಅಧಿಕೃತ ದಾಖಲೆಗಳ ನಮೂದು ಇಲ್ಲದ ಕಾರಣ ಪ್ರತಿವಾದಿಗಳ ತಂದೆಯು ಓಡಾಡಲು ಬಳಸುವ ಉದ್ದೇಶಕ್ಕಾಗಿಯೇ ಗಜಾನನ ಶೇಟ್‌ರವರಿಂದ 0-1-8 ಆಣೆ ಕ್ಷೇತ್ರವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಸ್ವತ್ತಿಗೆ ಹೋಗಲು ಇರುವ 0-1-8 ಆಣೆ ಕ್ಷೇತ್ರದ ದಾರಿಯನ್ನು ಉತ್ತಮಗೊಳಿಸಲು ಚೀರೆಕಲ್ಲು ಮತ್ತು ಮಣ್ಣನ್ನು ಸಂಗ್ರಹಣೆ ಮಾಡಿದ್ದ ಸಂದರ್ಭದಲ್ಲಿ ನಾವು ಸುಳ್ಳು ಅಂಶಗಳಿಂದ ಕೂಡಿದ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಚೀರೆಕಲ್ಲು ಮತ್ತು ಮಣ್ಣನ್ನು ನಾನು ಶೇಖರಣೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಚೀರೆಕಲ್ಲು ಮತ್ತು ಮಣ್ಣನ್ನು ನಾನು ಸಂಗ್ರಹಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅನಾದಿ ಕಾಲದಿಂದ ಸದರಿ ದಾರಿಯನ್ನು ಉಪಯೋಗಿಸುತ್ತಾ ಬಂದಿದ್ದು, ದುರುದ್ದೇಶಪೂರ್ವಕವಾಗಿ ನಾನು ಸದರಿ ದಾರಿಯನ್ನು ಬಂದ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾರಿಯನ್ನು ಹೊರತುಪಡಿಸಿ ಪ್ರತಿವಾದಿಗಳಿಗೆ ತಮ್ಮ ಹಕ್ಕಿನ ಸ್ವತ್ತಾದ ಸ.ನಂ. 636/3 ಕ್ಕೆ ಹೋಗಲು ಇತರ ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ 6 ನೇ ಪುಟದಲ್ಲಿ ಪ್ರತಿವಾದಿಯರು ತಮ್ಮ ಹಕ್ಕಿನ ಸ್ಥಳಕ್ಕೆ ಹೋಗಿ ಬರಲು ಅನಾದಿಯಿಂದ ರಾಷ್ಟ್ರೀಯ ಹೆದ್ದಾರಿಯಿಂದ ದೇವರ್ಸ ನಾಯ್ಕ ಗ್ರಾಮ

ದೇವಸ್ಥಾನಕ್ಕೆ ತಲುಪುವ ರಸ್ತೆಯಲ್ಲಿ ಓಡಾಡುತ್ತಿದ್ದಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯ 6 ನೇ ಪುಟದಲ್ಲಿ ಪ್ರತಿವಾದಿಯರು ಅನಾದಿ ಕಾಲದಿಂದಲೂ ಉಪಯೋಗಿಸುತ್ತಿದ್ದಾರೆ ಎಂದು ಹೇಳುವಂತಹ ರಸ್ತೆ ಅಸ್ತಿತ್ವದಲ್ಲಿಯೇ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸ.ನಂ. 638 ಅ/2 ಅ ದಲ್ಲಿ ಇರುವ ದಾರಿಯನ್ನೇ ಅನಾದಿ ಕಾಲದಿಂದ ಉಪಯೋಗಿಸುತ್ತಾ ಬಂದಿದ್ದು, ಸದರಿ ರಸ್ತೆಯನ್ನು ಉಪಯೋಗಿಸಿ ಬರುವಲ್ಲಿ ಹಕ್ಕುಳ್ಳವರಾಗಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.10 ರ ದಾಖಲಾತಿಯನ್ನು ಪ್ರಕರಣಕ್ಕೆ ಪೂರಕವಾಗುವ ರೀತಿಯಲ್ಲಿ ನಿಯಮಗಳ ಉಲ್ಲಂಘನೆ ಮಾಡಿ ಸೃಷ್ಟಿಸಿಕೊಳ್ಳಲಾಗಿದ್ದು, ಅದರ ಆಧಾರದ ಮೇರೆಗೆ ನಾವು ಯಾವುದೇ ರೀತಿಯ ಪರಿಹಾರಗಳನ್ನು ಪಡೆಯಲು ಅರ್ಹರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.9 ರಲ್ಲಿ ಸ.ನಂ. 638/2 ಬ ಕ್ಷೇತ್ರವನ್ನು ಮಾತ್ರ ಅಳತೆ ಮಾಡುವ ಬಗ್ಗೆ ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಇತರ ಸ್ವತ್ತುಗಳನ್ನೂ ಸಹ ಅಳತೆ ಮಾಡಿರುತ್ತಾರೆ, ಪ್ರತ್ಯೇಕವಾದ ತಿಳುವಳಿಕೆ ಪತ್ರವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ಇಲಾಖೆಯವರು ಸ್ವತ್ತನ್ನು ಅಳತೆ ಮಾಡಿದ ಸಂದರ್ಭದಲ್ಲಿ ಕೇವಲ ಸ.ನಂ. 638/2 ಬ ಸ್ವತ್ತನ್ನು ಮಾತ್ರ ಅಳತೆ ಮಾಡಿದ್ದು, ಇತರ ಯಾವುದೇ ಸ್ವತ್ತುಗಳನ್ನು ಅಳತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಸರ್ವೆಯರ ಇವರು ಸ.ನಂ. 638/2 ಬ ಸ್ವತ್ತನ್ನು ಅಳತೆ ಮಾಡಿದ ಸಂದರ್ಭದಲ್ಲಿ ಪ್ರತಿವಾದಿಗಳ ತಂದೆ ನಾರಾಯಣ ಶ್ಯಾನಭಾಗರವರು ಖರೀದಿಸಿದ 0-1-8 ಆಣೆ ಕ್ಷೇತ್ರವನ್ನು ಅಳತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ ಸ್ವತ್ತಿಗೂ ಅಳತೆ ಕಾರ್ಯಕ್ಕೂ ಸಂಬಂಧ ಇರುವುದಿಲ್ಲ, ನಮಗೆ ಸೇರಿದ 0-8-0 ಕ್ಷೇತ್ರದಲ್ಲಿ 0-1-8 ಆಣೆ ಕ್ಷೇತ್ರವನ್ನು ಪ್ರತಿವಾದಿಗಳು ಅತಿಕ್ರಮಣ ಮಾಡಿರುವುದಾಗಿ ನಕಾಶೆಯಲ್ಲಿ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆಯರರವರು ಪ್ರತಿವಾದಿಗಳ ತಂದೆ ಖರೀದಿಸಿದ 0-1-8 ಆಣೆ ಸ್ವತ್ತನ್ನು ಅಳತೆ ಮಾಡಿರುವುದಿಲ್ಲ,

ನಮಗೆ ಸೇರಿದ 0-8-0 ಕ್ಷೇತ್ರವನ್ನು ಅಳತೆ ಮಾಡಿರುತ್ತಾರೆ. ಹಿಸ್ಸಾ ನಕಾಶೆಗೂ ಪೋಡಿ ನಕಾಶೆಗೂ ವ್ಯತ್ಯಾಸ ಇರುವುದು ಕಂಡುಬಂದಿದ್ದರೂ ಸಹ ಸರ್ವೆಯರರವರು ಪೋಡಿ ನಕಾಶೆಯ ಆಧಾರದ ಮೇರೆಗೆ ಪ್ರತಿವಾದಿಗಳ ತಕರಾರು ಇದ್ದರೂ ಸಹ ಸರ್ವೆ ಕಾರ್ಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ಸಂದರ್ಭದಲ್ಲಿ ಹಾಗೂ ಸರ್ವೆ ಕಾರ್ಯ ಆದ ನಂತರವೂ ಸಹ ಪ್ರತಿವಾದಿಗಳು ಸರ್ವೆ ಕಾರ್ಯಕ್ಕೆ ತಕರಾರು ಸಲ್ಲಿಸಿದ್ದರೂ ಸಹ ಸಂಬಂಧಪಟ್ಟ ಇಲಾಖೆಯವರು ನನ್ನ ಆಮಿಷಕ್ಕೆ ಒಳಗಾಗಿ ನನಗೆ ಅನುಕೂಲವಾಗುವ ರೀತಿಯಲ್ಲಿ ವರದಿ ಹಾಗೂ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ ಸರ್ವೆಯರರವರು ತಯಾರಿಸಿದಂತಹ ನಕಾಶೆ ಕಾನೂನುಬಾಹಿರ ಆಗಿರುವ ಕಾರಣ ಅದರ ಆಧಾರದ ಮೇರೆಗೆ ನಾವು ಯಾವುದೇ ಪರಿಹಾರಗಳನ್ನು ಪಡೆಯಲು ಅರ್ಹರಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ಪ್ರಸ್ತುತ ಸುಳ್ಳು ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ನ್ಯಾಯಾಲಯದ ನಿಯೋಗಿಯವರನ್ನು ನೇಮಕ ಮಾಡಿ ನಮ್ಮ ಹಕ್ಕಿನ ಹಾಗೂ ಪ್ರತಿವಾದಿಗಳ ಹಕ್ಕಿನ ಸ್ಥಳಗಳನ್ನು ಸರ್ವೆ ಮಾಡಿ ಅಳತೆ ಮಾಡಿಸಲು ನನ್ನ ತಕರಾರು ಇರುವುದಿಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ